ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯಿಂದ ಪ್ರತಿ ದಿನ ಹೊರ ಹೋಗುತ್ತಿರುವ ಕೊಳಚೆ ನೀರಿನ ಪ್ರಮಾಣವೆಷ್ಟು?

ಆ) ಈ ನೀರನ್ನು ಶುದ್ಧೀಕರಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಹೀಗೆ ಶುದ್ಧೀಕರಿಸಿದ ನೀರನ್ನು ಯಾವ ರೀತಿ ಉಪಯೋಗಿಸಲಾಗುತ್ತಿದೆ?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ಸುಮಾರು 444 ದಶಲಕ್ಷ ಲೀಟರ್ ಕೊಳಚೆ ನೀರು ಒಳಚರಂಡಿ ವ್ಯವಸ್ಥೆಯಿಂದ ಪ್ರತಿ ದಿನ ಹೊರ ಹೋಗುತ್ತದೆ.

ಆ) ಈ ಕೊಳಚೆ ನೀರನ್ನು ಬೆಂಗಳೂರು ನಗರದ ಎರಡು ಮುಖ್ಯ ಕಣಿವೆಗಳಲ್ಲಿರುವ ಕೋರಮಂಗಲ ಚಲ್ಲಘಟ್ಟ ಸಂಸ್ಕರಣ ಘಟಕ ಮತ್ತು ವೃಷಭಾವತಿ ಸಂಸ್ಕರಣ ಘಟಕ ಇವುಗಳಲ್ಲಿ ಶುದ್ಧೀಕರಿಸಲಾಗುತ್ತಿದೆ. ಇದಲ್ಲದೆ ಹೆಬ್ಬಾಳ ಕಣಿವೆಯಲ್ಲಿ ಸಹ ಒಂದು ಸಂಸ್ಕರಣ ಘಟಕವನ್ನು ನಿರ್ಮಿಸಲಾಗುತ್ತಿದೆ ಮತ್ತು ಈ ಘಟಕದ ಕೆಲಸವು ಮುಕ್ತಾಯ ಹಂತದಲ್ಲಿದೆ.

ಇ) ಈ ಎರಡು ಘಟಕಗಳಲ್ಲಿ ಶುದ್ಧೀಕರಿಸಿದ ಕೊಳಚೆ ನೀರು ತೆರೆದ ಕಾಲುವೆಗಳ ಮೂಲಕ ಹರಿದು ಬೆಳ್ಳಂದೂರು ಮತ್ತು ಬೈರಮಂಗಲ ಕೆರೆಗಳನ್ನು ಸೇರುತ್ತದೆ. ಹೀಗೆ ಶುದ್ಧೀಕರಿಸಿದ ನೀರನ್ನು ಈಗ ಮಂಡಲಿಯಲ್ಲಿ ಯಾವ ಉದ್ದೇಶಕ್ಕೂ ಬಳಸುತ್ತಿಲ್ಲ. ಕರ್ನಾಟಕ ವಿದ್ಯುತ್ ನಿಗಮ ಮತ್ತು ಖಾಸಗಿ ವಿದ್ಯುತ್ ಕಂಪನಿಗಳು ಮೈಸೂರು ರಸ್ತೆಯಲ್ಲಿ ಸ್ಥಾಪಿಸಲಿರುವ ವಿದ್ಯುತ್ ಉತ್ಪಾದನೆ ಕೇಂದ್ರದ ಬಳಕೆಗಾಗಿ ಅವಶ್ಯವಿರುವ ಸುಮಾರು 70 ದಶಲಕ್ಷ ಲೀಟರ್ ನೀರನ್ನು ವೃಷಭಾವತಿ ಸಂಸ್ಕರಣ ಕೇಂದ್ರದಿಂದ ತೆಗೆದುಕೊಂಡು ಬಳಸಲು ಉದ್ದೇಶಿಸಿದೆ. ಈ ಬಗ್ಗೆ ಈಗಾಗಲೇ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಇದಲ್ಲದೆ ಮೆ:ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಸಂಸ್ಥೆಯು ಮೈಸೂರು ರಸ್ತೆಯಲ್ಲಿ ಅಭಿವೃದ್ಧಿ ಪಡಿಸುವ ಪ್ರದೇಶಗಳಿಗೆ ಗೃಹೇತರ ಬಳಕೆಗಳಿಗಾಗಿ ಈ ನೀರನ್ನು ಸರಬರಾಜು ಮಾಡಲು ಕೋರಿಕೆ ಸಲ್ಲಿಸಿದೆ.

ವಿಷಯ: ರಾಜ್ಯದಲ್ಲಿರುವ ಕೆರೆಗಳ ಅಭಿವೃದ್ಧಿ

924 (1216)

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೆರೆಗಳಿವೆ ಎಂದು ಗುರುತಿಸಲಾಗಿದೆ; ಹಾಲಿ ಈಗ ಎಷ್ಟು ಕೆರೆಗಳು ಇವೆ?

ಆ) ಬೆಂಗಳೂರು ಮಹಾನಗರದಲ್ಲಿ ಲಕ್ಷ್ಮಣರಾವ್ ವರದಿಯಲ್ಲಿ ಎಷ್ಟು ಕೆರೆಗಳನ್ನು ಗುರುತಿಸಲಾಗಿತ್ತು?

ಇ) ಈಗಿರುವ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಏನಾದರೂ ಕ್ರಮ ಕೈಗೊಂಡಿದೆಯೇ; ಪೂರ್ಣ ವಿವರ ನೀಡುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿ 36,679 ಸಣ್ಣಕೆರೆಗಳಿವೆ ಎಂದು ಗುರುತಿಸಲಾಗಿದೆ.

ಆ) ಶ್ರೀ ಲಕ್ಷ್ಮಣರಾವ್ ರವರ ವರದಿಯಂತೆ ಕೆರೆಗಳು ಮಹಾನಗರದ ವ್ಯಾಪ್ತಿಯಲ್ಲಿ 127 ಕೆರೆಗಳಿವೆ ಎಂದು ಗುರುತಿಸಲಾಗಿದೆ.

ಇ) ಈ ವಲಯದ ವ್ಯಾಪ್ತಿಯಲ್ಲಿರುವ ಕೆರೆಗಳು ನೀರಾವರಿಗೆ ಸೀಮಿತವಾಗಿದ್ದು, ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಕಾಲಕಾಲಕ್ಕೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಹಾಗೂ ಪ್ರತಿ ವರ್ಷವೂ ಆಯವ್ಯಯದಲ್ಲಿ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ರಮದಡಿಯಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ವಿಷಯ: ಮೈಸೂರು ನಗರದಲ್ಲಿ ಪಡಿತರ ಚೀಟಿ ಹಂಚುವಿಕೆ.

926 (1321)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು, ಪಡಿತರ ಚೀಟಿ ನೀಡುವುದನ್ನು ನಿಲ್ಲಿಸಲಾಗಿದೆಯೇ?

ಆ) ಮೈಸೂರು ನಗರದಲ್ಲಿ ಹೊಸದಾಗಿ ಪಡಿತರ ಚೀಟಿ (ಹಸಿರು ಪಡಿತರ ಚೀಟಿ ಸೇರಿ)ಯನ್ನು ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಈ ಅರ್ಜಿದಾರರಿಗೆ ಪಡಿತರ ಚೀಟಿ ಯಾವಾಗ ನೀಡಲಾಗುವುದು?